# ಮಾಯೆಯೆಂದರೆ ಏನು ಪ್ರಭುವೇ?

## ಇಮೋಜಿ ಭಾಷೆ



ಕರ್ಕಿ ಕೃಷ್ಣಮೂರ್ತಿ

**ಲೋ**ಕಸಂಚಾರದಲ್ಲಿ ಇದ್ದಾಗಲೊಮ್ಮೆ ನಾರದನು ವಿಷ್ಣುವನ್ನೊಂದು ಪ್ರಶ್ನೆ ಕೇಳಿದನಂತೆ. ‘ಈ ಮಾಯೆಯೆಂದರೆ ಏನು ಪ್ರಭುವೇ?’ ಪ್ರಶ್ನೆಗೆ ಉತ್ತರಿಸುವ ಬದಲು ವಿಷ್ಣು, ‘ಬಹಳ ಬಾಯಾರಿಕೆಯಾಗುತ್ತಿದೆ, ಕುಡಿಯಲು ತುಸು ನೀರು ತಂದುಕೊಡುವೆಯಾ?" ಎಂದು ಕೋರುತ್ತಾನೆ. ಅಲ್ಲಿಂದ ಹೊರಟು ನೀರಿಗಾಗಿ ಅರಸುತ್ತಿರುವಾಗ ನಾರದನಿಗೆ ಗುಡಿಸಲೊಂದು ಕಾಣುತ್ತದೆ. ಆ ಗುಡಿಸಲಿನಲ್ಲೊಬ್ಬಳು ಸುಂದರ ತರುಣಿಯಿರುತ್ತಾಳೆ. ‘ನೀರು ಬೇಕು’ ಎಂದು ಕೇಳುವ ಬದಲು, ‘ನೀನು ಬೇಕು’ ಎಂದು ನಾರದ ಆಕೆಯನ್ನು ಕೇಳುವುದರಿಂದ ಆರಂಭಗೊಂಡು, ಅವರಿಬ್ಬರ ನಡುವೆ ಪ್ರೇಮಾಂಕುರ, ಮದುವೆ, ಸಂಸಾರ, ಮಕ್ಕಳು ಇತ್ಯಾದಿಗಳೆಲ್ಲಾ ಆಗಿ ವರ್ಷಗಳುರುಳುತ್ತವೆ. ಹೀಗಿರುವಾಗಲೊಂದು ದಿನ ಆ ಊರಲ್ಲಿ ಭೀಕರ ಪ್ರವಾಹ ಬಂದು ಊರಿಗೆ ಊರೇ ಮುಳುಗಿ ಹೋಗುತ್ತದೆ. ನೀರಿನ ರಭಸಕ್ಕೆ ಕೊಚ್ಚಿ ಹೋಗುತ್ತಿರುವ ಹೆಂಡತಿ ಮಕ್ಕಳನ್ನು ಉಳಿಸಿಕೊಳ್ಳಲು ನಾರದ ಹರಸಾಹಸ ಮಾಡಿ ವಿಫಲನಾಗುತ್ತಾನೆ. ಮರದ ಬೊಡ್ಡೆಯ ಸಹಾಯದಿಂದ ತಾನೊಬ್ಬ ಹೇಗೋ ಬಚಾವಾಗಿ ದಡಕ್ಕೆ ಬಂದು ಬಿದ್ದು ಉಸಿರೆಳೆದುಕೊಳ್ಳುತ್ತಿರುವಾಗ ಹಿಂದಿನಿಂದ ಮೆಲುದನಿಯೊಂದು ಕೇಳುತ್ತದೆ – ‘ನಾರದಾ, ಕುಡಿಯಲು ನೀರು ತಂದೆಯಾ?’

ಪುರಾಣದ ಪ್ರಚಲಿತ ಕಥೆ ಇದು. ಕಾಲದ ಪರಿಧಿಯೊಳಗೆ ಹಿಡಿದಿಡಲಾಗದ ಈ ಕಥೆಯನ್ನು ಸದ್ಯಕ್ಕೆ ಬದಿಗಿಟ್ಟು, ವರ್ತಮಾನಕ್ಕೆ ಬರೋಣ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ‘ದ ನೆಟ್’ ಅನ್ನುವ ಇಂಗ್ಲಿಷ್ ಸಿನಿಮಾ ಬಂದಿತ್ತು. ಅದರ ನಾಯಕಿ ಸಾಫ್ಟ್‌ವೇರ್ ತಜ್ಞೆ. ಮನೆಯಲ್ಲೇ ಕುಳಿತು ಕಂಪ್ಯೂಟರಿನ ಸಹಾಯದಿಂದಲೇ ತನ್ನ ಎಲ್ಲ ಬಾಹ್ಯ ಚಟುವಟಿಕೆಗಳನ್ನೂ ನಿರ್ವಹಿಸುತ್ತಿರುತ್ತಾಳೆ. ಮುಂದೊಂದು ದಿನ ಮನೆಯಿಂದ ಹೊರಬಂದು ನೋಡಿದರೆ, ಅವಳದೇ